ಬೆಂಗಳೂರು ನಗರ ಜಿಲ್ಲೆಯ ಈ ಹಿಂದಿನ 7 ನಗರ ಸಭೆಗಳ ಪಡಿತರ ಚೀಟಿಗಳು ಸೇರಿ)

ಈ ಕೆಳಕಂಡಂತ್ತಿದೆ.

ಅನ್ನಪೂರ್ಣ	–	25,552
ಎಎವೈ	–	11,75,903
ಅಕ್ಷಯ (ಬಿಪಿಎಲ್)	–	61,27,982
ಎಪಿಎಲ್	–	45,52,766
ಒಟ್ಟು		**1,18,82,203**

ಆ) ಈವರೆಗೆ 1,18,82,203 ಪಡಿತರ ಕೂಪನ್‌ಗಳನ್ನು ವಿತರಿಸ ಲಾಗಿರುತ್ತದೆ.

ಇದುವರೆವಿಗೂ ಪಡಿತರ ಚೀಟಿ ಪಡೆಯದ ಅರ್ಹ ಕುಟುಂಬ ಗಳನ್ನು ಗುರುತಿಸಿ ಪಡಿತರ ಕೂಪನ್‌ಗಳನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.

ಇ) ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ 12,482 ಎಎವೈ 29,162 ಅಕ್ಷಯ, 14,344 ಎಪಿಎಲ್ ಒಟ್ಟು 55,988 ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಈ ತಾಲ್ಲೂಕಿನಲ್ಲಿ ತಿಂಗಳೊಂದಕ್ಕೆ 8795 ಕ್ವಿಂಟಾಲ್ ಅಕ್ಕಿ, 2,073 ಕ್ವಿಂ, ಗೋಧಿ, 806.21 ಕ್ವಿಂ ಸಕ್ಕರೆ ಹಾಗೂ 228 ಕೆ.ಎಲ್. ಸೀಮೆಎಣ್ಣೆಯನ್ನು ಹಂಚಲಾಗುತ್ತಿದೆ.

1169 (1272) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳು ಸರ್ಕಾರದ ಆದೇಶದಂತೆ ಬಡ್ಡಿ ಮತ್ತು ಸಾಲ ಮನ್ನಾ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಕ್ಕಾಗಿ ಸರ್ಕಾರವು ಸಹಕಾರಿ ಸಂಸ್ಥೆಗಳಿಗೆ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಮತ್ತು ಅಪೆಕ್ಸ್ ಬ್ಯಾಂಕಿಗೆ ಇನ್ನು ನೀಡಬೇಕಾಗಿರುವ ಮೊತ್ತವೆಷ್ಟು?

ಆ) ಸರ್ಕಾರವು ಈ ಹಣವನ್ನು ಬಿಡುಗಡೆ ಮಾಡುವಲ್ಲಿ ವಿಳಂಬ ಮಾಡುತ್ತಿರುವುದು ಸಹಕಾರಿ ಸಂಘಗಳ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದರ ಜೊತೆಗೆ ರೈತರಿಗೆ ಸಹಕಾರ ಸಾಲಗಳನ್ನು ನೀಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಬಾಕಿ ಇರುವ ಹಣವನ್ನು ತುರ್ತಾಗಿ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) ಹಿಂದಿನ ವರ್ಷಗಳಲ್ಲಿ ಸರ್ಕಾರವು ಮಂಜೂರು ಮಾಡಿದ ಸೌಲಭ್ಯಗಳ ಬಾಬ್ತು ಡಿಸಿಸಿ ಬ್ಯಾಂಕುಗಳಿಗೆ ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕೊಡಬೇಕಾದ ಬಾಕಿ ರೂ. 1943.25 ಕೋಟಿ ಇದೆ. ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಿದೆ.

ಆ) ಬಂದಿದೆ.

ಇ) ಬಾಕಿ ಇರುವ ಹಣವನ್ನು ಆದಷ್ಟು ಬೇಗ ಸರ್ಕಾರವು ಸಹಕಾರಿ ಸಂಸ್ಥೆಗಳಿಗೆ ಭರಿಸಿಕೊಡಲು ಕ್ರಮ ಕೈಗೊಳ್ಳುತ್ತದೆ.

ವಿಧಾನಸಭೆ ಸದಸ್ಯರಾದ ಮಾನ್ಯ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 1272ರ ಅನುಬಂಧ

ಕ್ರ. ಸಂ.	ಯೋಜನೆ	ಬಾಕಿ ಇರುವ ಮೊಬಲಗು
1	ಮುಂಗಾರು 2002ರ ಬೆಳೆ ಸಾಲಗಳ ಮೇಲಿನ ಬಡ್ಡಿ ಮನ್ನಾ ಬಾಬ್ತು	ರೂ. 9.37 ಕೋಟಿ
2	ಅಸಲಿಗಿಂತ ಹೆಚ್ಚು ಬಡ್ಡಿಯನ್ನು ಪಾವತಿಸಿರುವ ರೈತರ ಬಾಕಿ ಸಾಲ ಮನ್ನಾ ಮಾಡುವುದು (2004–05)	ರೂ. 17.51 ಕೋಟಿ
3	ಶೇ.6ರ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡಿಕೆ ಯೋಜನೆಯಡಿ ಬಡ್ಡಿ ಸಹಾಯಧನ (2005–06)	ರೂ. 40.00 ಕೋಟಿ
4	ಬಡ್ಡಿ, ದಂಡದ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಸಹಕಾರ	ರೂ. 124.86 ಕೋಟಿ

	ಸಂಘಗಳಿಗೆ ತುಂಬಿಕೊಡಬೇಕಾದ ಹಣ (2005–06)	
5	ವಿಫಲಬಾವಿ ಪರಿಹಾರ ಯೋಜನೆ–ಯಡಿ ಬಾಕಿ ಇರುವ ಹಣ ಬಿಡುಗಡೆ (ಹಲವಾರು ವರ್ಷಗಳಿಂದ)	ರೂ. 10.91 ಕೋಟಿ
6	ಅತಿ ಹೆಚ್ಚಿನ ಆತ್ಮಹತ್ಯೆ ಒಳಗಾದಂತಹ ಜಿಲ್ಲೆಗಳಲ್ಲಿನ ರೈತರ ಪುನರ್ವಸತಿಗಾಗಿ ಪರಿಹಾರ ಯೋಜನೆ (2006–07)	(ಅಂದಾಜು) ರೂ. 49.48 ಕೋಟಿ
7	ಶೇ.4ರ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡಿಕೆ ಯೋಜನೆಯಡಿ ಬಡ್ಡಿ ಸಹಾಯಧನ (2006–07)	(ಅಂದಾಜು) ರೂ. 141.12 ಕೋಟಿ
8	2006–07ನೇ ಸಾಲಿನ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆ	ರೂ. 1550.00 ಕೋಟಿ
	ಒಟ್ಟು	**ರೂ. 1943.25 ಕೋಟಿ**

1171 (1274) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಗೆ ಒದಗಿಸಿರುವ ಹಣದ ಮೊತ್ತವೆಷ್ಟು;

ಆ) ಇದರಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಈ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು;

ಇ) ಬೀದರ್ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳನ್ನು ಉತ್ತೇಜಿಸಲು ಸರಕಾರದ ಮುಂದಿರುವ ಕ್ರಮಗಳೇನು;

ಈ) ರಾಜ್ಯದಲ್ಲಿ ತೋಟಗಾರಿಕಾ ಮಿಷನ್‌ನ ಕಾರ್ಯಕ್ರಮಕ್ಕೆ ಸರಕಾರ ಕೈಗೊಂಡಿರುವ ಕ್ರಮಗಳೇನು;

ಉ) ಇದಕ್ಕೆ ಆಯ್ಕೆಯಾಗಿರುವ ಜಿಲ್ಲೆಗಳು ಯಾವುವು; ಬೀದರ್ ಜಿಲ್ಲೆಯನ್ನು ಈ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆಯೇ; ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು (ವಿವರ ನೀಡುವುದು)?